ಬೇಸಿಗೆಕಾಲ ಎಂಬ ಎರಡೇ ಕಾಲ ಇಲ್ಲಿನ ಪ್ರಮುಖ ಕಾಲಮಾನಗಳು. ಮಳೆಗಾಲದಲ್ಲಿ ಆ ಅಂಗಿಮೇಲೆ ಮತ್ತೊಂದು ಅಂಗಿ ಹಾಕಿಕೊಂಡು, ಹೆಂಗಸರು ನೇಜಿ ನಾಟಿ ಕಾರ್ಯಕ್ಕೆ ಹೋಗುವಾಗ ಪನೆ, ಕೊರಬು ಇಲ್ಲದವರು ಪ್ಲಾಸ್ಟಿಕ್ ತಂದು ಪನೆಯಂತೆ ಬಳಸುತ್ತಾರಲ್ಲ, ಅಂಥದ್ದೇ ಪ್ಲಾಸ್ಟಿಕ್ ಹಾಕಿಕೊಂಡು ತಲೆಗೆ ರೇನ್‌ಕೋಟ್‌ನ ಹ್ಯಾಟನ್ನು ಕಿವಿ ಮುಚ್ಚುವ ಹಾಗೆ ಕಟ್ಟಿಕೊಂಡು ಇರುತ್ತಿದ್ದ. ಇದಲ್ಲದೆ ಕೈಯಲ್ಲೊಂದು ಲುಂಗಿಯಿಂದ ಜೋಳಿಗೆಯಂತೆ ಕಟ್ಟಿರುವ ಬಟ್ಟೆಗಂಟು ಮತ್ತು ಕೋಲು ತಪ್ಪುತ್ತಿರಲಿಲ್ಲ. ಕೋಲು ಕಂಬಳದಲ್ಲಿ ಕೋಣ ಓಡಿಸಲು ಬಳಸುವ ಬೆತ್ತದಂತೆ ಇದೆ. ಆದರೆ ಕೋಣ ಓಡಿಸುವವರು ಬೆತ್ತದ ಒಂದು ತುದಿಗೆ ಅಂದರೆ, ತಾವು ಕೈಯಲ್ಲಿ ಹಿಡಿದುಕೊಳ್ಳುವ ತುದಿಗೆ ಮಾತ್ರ ಟಂಗೀಸ್ ನೇಯ್ದು ಅಲಂಕಾರ ಮಾಡಿರುತ್ತಾರೆ. ಇದು ಎರಡೂ ತುದಿಗೆ ಆ ರೀತಿಯ ಸಿಂಗಾರ ಮಾಡಿದ ಬೆತ್ತ.

ಮೊದಲು ಹುಚ್ಚ ಎಂಬ ಪಟ್ಟ ಕಟ್ಟಲಾಗಿತ್ತು. ಆದರೆ ಈ ಮಾತುಗಳನ್ನು ಹೊರತುಪಡಿಸಿ ಜನರಿಗೆ ಯಾವುದೇ ತೊಂದರೆ ಇಲ್ಲದಿರುವುದರಿಂದ ಮತ್ತು ಒಂದು ರೂಪಾಯಿ ಬೇಡುತ್ತಿದ್ದುದರಿಂದ ಭಿಕ್ಷುಕ ಇರಬೇಕು ಎಂದು ತೀರ್ಮಾನಿಸಿದ್ದರು. ಆದರೂ ಹುಚ್ಚನೇ ಭಿಕ್ಷುಕನೇ ಎಂಬುದು ಯಾರಿಗೂ ಸ್ಪಷ್ಟ ಇರಲಿಲ್ಲ. ಅದಕ್ಕೆ ಸರಿಯಾಗಿ ಪ್ರತಿ ಶುಕ್ರವಾರ ಬೆಳಗ್ಗೆ ಕೈಯಲ್ಲೊಂದು ಕೋಲು ಹಿಡಿದುಕೊಂಡು ತನ್ನಲ್ಲಿರುವ ಒಂದು ಬಟ್ಟೆಯ ಗಂಟನ್ನು ಹೆಗಲ ಮೇಲೆ ಹಾಕಿಕೊಂಡು ನಡೆಯತೊಡಗಿದರೆ ಸಂಜೆ ಹೊತ್ತಿಗೆ ಸುಮಾರು 50 ಕಿಲೋಮೀಟರ್ ದೂರ ಕ್ರಮಿಸುತ್ತಿದ್ದ. ಮರುದಿನ ಬೆಳಗ್ಗೆ ಅಲ್ಲಿಂದ ಹೊರಟು ಸಂಜೆ ಹೊತ್ತಿಗೆ ಮತ್ತೆ ಬಿಳಲೂರಿಗೆ ತಲುಪುತ್ತಿದ್ದ. ಅದೂ ಜನರಿಗೆ ಅಭ್ಯಾಸವಾಗಿ, ವಾರದಲ್ಲಿ ಎರಡು ಹಗಲು ಒಂದು ರಾತ್ರಿ ಆತ ಯಾವಾಗ ಇರುವುದಿಲ್ಲ ಎಂಬುದನ್ನು ಪುಟ್ಟ ಮಕ್ಕಳು ಕೂಡಾ ಹೇಳುತ್ತಿದ್ದರು.

ಆತ ಒಂದು ರೂಪಾಯಿ ಕೇಳುವುದರಲ್ಲಿ ಇರುವ ಶಿಸ್ತು ಜನರಲ್ಲಿ ಈತನ ಬಗ್ಗೆ ಅನುಕಂಪದ ಜತೆಗೆ ಗೌರವ ಮೂಡಿಸಿತ್ತು. ವಾರಕ್ಕೊಂದು ದಿನ ಆತ ನಡೆಯುತ್ತಲೇ 50 ಕಿಲೋ ಮೀಟರ್ ಹೋಗುತ್ತಿದ್ದನಲ್ಲ, ಆಗ ರಸ್ತೆಯ ಒಂದೇ ಬದಿಯಿಂದ ಹೋಗುತ್ತಾನೆ. ಇನ್ನೊಂದು ಕಡೆಗೆ ಬರುವುದೇ ಇಲ್ಲ. ಮತ್ತು ಆ ಕಡೆಯ ಅಂಗಡಿಗಳಿಗೆ ಮಾತ್ರ ಹೋಗಿ ಒಂದು ರೂಪಾಯಿ ಅನ್ನುತ್ತಿದ್ದ. ರಸ್ತೆ ಬದಿಯಲ್ಲಿರುವ ಯಾವ ಮನೆಗೂ ಹೋಗುತ್ತಿರಲಿಲ್ಲ. ಅಂಗಡಿಯವ ಒಂದು ರೂಪಾಯಿ ಕೊಡುವವರೆಗೆ ಕದಲುತ್ತಿರಲಿಲ್ಲ. ಕೊಟ್ಟ ಮೇಲೆ ಹೊರಡುತ್ತಿದ್ದ. ಬೇರೆ ಯಾರಾದರೂ ಒಂದು ರೂಪಾಯಿ ಕೊಟ್ಟರೆ ತೆಗೆದುಕೊಳ್ಳುತ್ತಿದ್ದ. ಹಾಗೆ ದುಡ್ಡುಕೊಟ್ಟವರು ಗೇಲಿ ಮಾಡಿದರೆ, 'ದುಡಿದು ತಿನ್ನಕ್ಕಾಗಲ್ವ' ಎಂದು ಸಲಹೆ ನೀಡಿದರೆ ಆ ಒಂದು ರೂಪಾಯಿಯನ್ನು ಅವರ ಕಾಲ ಬುಡಕ್ಕೆ ಎಸೆದು ಹೋಗುತ್ತಿದ್ದ. ಅವನ ಮುಖಭಾವ ನೋಡಿದರೆ ಅವರ ಮುಖಕ್ಕೆ ಬಿಸಾಡಿದಂತೆ ಇರುತ್ತಿತ್ತು. ಆನಂತರ ಅವರ ಕೈಯಿಂದ ಒಂದು ರೂಪಾಯಿ ತೆಗೆದುಕೊಳ್ಳುತ್ತಿರಲಿಲ್ಲ. ಕೊಡುವವರೇ ಒತ್ತಾಯಿಸಿ, ಸಮಾಧಾನ ಮಾಡಿದರೆ, ಇನ್ನು ಮುಂದೆ ಇವರು ಗೇಲಿ ಮಾಡುವುದಿಲ್ಲ ಎಂಬುದು ಅವನಿಗೆ ಮನವರಿಕೆಯಾದರೆ ಮಾತ್ರ ಒಂದು ರೂಪಾಯಿ ತೆಗೆದುಕೊಳ್ಳುತ್ತಿದ್ದ. ಬರುವಾಗ ರಸ್ತೆಯ ಇನ್ನೊಂದು ಬದಿಯಿಂದ ಬರುತ್ತಾನೆ; ಆಗ ಆ ಬದಿಯಲ್ಲಿರುವ ಅಂಗಡಿಗಳಿಂದ ಮಾತ್ರ ಒಂದು ರೂಪಾಯಿ ತೆಗೆದುಕೊಳ್ಳುತ್ತಿದ್ದ.

'ಹಾಟ್‌ಮಿಟ್ಲೆ ಡೂ ಮಿಟ್ಲೆ ಹಾಟ್ ಹಾಟ್ ಹಾಟ್' ಅಥವಾ 'ಕಾಸ್ಟ್ ಮಿಟ್ಲೆ ವೈಟ್ ಮಿಟ್ಲೆ ಕಾಸ್ಟ್ ಕಾಸ್ಟ್ ಕಾಸ್ಟ್' ಎಂಬ ಅರ್ಥವಾಗದ ಮಾತುಗಳನ್ನು ಹೊರತುಪಡಿಸಿದರೆ ಆತ